ಶ್ರೀ ಪದ್ಧತಿ ಮತ್ತು ಪ್ರಚಲಿತ ಪದ್ಧತಿಯಲ್ಲಿನ ವ್ಯತ್ಯಾಸ

ವಿವರ	ಪ್ರಚಲಿತ ಪದ್ಧತಿ	'ಶ್ರೀ' ಪದ್ಧತಿ
ಬಿತ್ತನೆ ಬೀಜ	25 ಕೆ.ಜಿ.	2 ಕೆ.ಜಿ.
ನೀರಿನ ಅಗತ್ಯ	50 ಲಕ್ಷ ಲೀಟರ್	21 ಲಕ್ಷ ಲೀಟರ್
ತೆಂಡೆ ಸಾಮರ್ಥ್ಯ	ಸಾಧಾರಣ	ಅತಿ ಹೆಚ್ಚು
ಬೇರಿನ ಬೆಳವಣಿಗೆ	ಕುಂಠಿತ	ಉತ್ತಮ
ರೋಗ/ಕೀಟ ಬಾಧೆ	ಹೆಚ್ಚು	ಕಡಿಮೆ
ಕಾಳಿನ ಇಳುವರಿ	17.88 ಕ್ವಿ	24.4 ಕ್ವಿ
ಹುಲ್ಲಿನ ಇಳುವರಿ	2.5 ಟನ್	3 ಟನ್
ಖರ್ಚು	10820 ರೂ.	10117 ರೂ.
ನಿವ್ವಳ ಆದಾಯ	11978 ರೂ.	16140 ರೂ.

(ಅಂಕಿ-ಅಂಶಗಳನ್ನು ಒಂದು ಎಕರೆಗೆ ಪರಿಗಣಿಸಲಾಗಿದೆ.)

ಮಾಹಿತಿ ಮೂಲ: ಅರೆ ನೀರಾವರಿ ಭತ್ತದ ಬೇಸಾಯ ಅನುಭವಗಳು, ಪ್ರಕಟಣೆ: ಕೃಷಿ ವಿ.ವಿ. ಬೆಂಗಳೂರು

ಕರ್ನಾಟಕ ರಾಜ್ಯವು ಅತೀವ ನೀರಿನ ಬಿಕ್ಕಟ್ಟನ್ನು ಎದುರಿಸುತ್ತಿದೆ. ಕಾರಣ ಹೆಚ್ಚುತ್ತಿರುವ ನೀರಿನ ಬೇಡಿಕೆ. ಕೃಷಿರಂಗ ಅತಿಹೆಚ್ಚು ನೀರನ್ನು ಬಳಸುತ್ತಿರುವ ವಲಯ. ಆದರೆ ಇತ್ತೀಚಿನ ವರ್ಷಗಳಲ್ಲಿ ಕೈಗಾರಿಕೆಗಳು, ಕುಡಿಯುವ ನೀರು ಹಾಗೂ ಇನ್ನಿತರೆ ವಲಯಗಳು ಹೆಚ್ಚುತ್ತಿರುವ ನೀರಿನ ಬೇಡಿಕೆಯಿಂದಾಗಿ ಕೃಷಿ ವಲಯಕ್ಕೆ ಲಭ್ಯವಾಗಬೇಕಾದ ನೀರಿನ ಪ್ರಮಾಣದಲ್ಲಿ ಗಣನೀಯ ಇಳಿಕೆಯಾಗುತ್ತಿದೆ. ಹವಾಮಾನ ವೈಪರೀತ್ಯದಿಂದಾಗಿ ಪರಿಸ್ಥಿತಿ ಮತ್ತಷ್ಟು ವಿಷಮಗೊಳ್ಳುವುದು ನಿರೀಕ್ಷಿತ.

ಇದನ್ನು ಗಮನದಲ್ಲಿಟ್ಟುಕೊಂಡು ಕರ್ನಾಟಕ ಸರ್ಕಾರವು ವಿಷ್ವಾ ಅಭಿವೃದ್ಧಿ ಬ್ಯಾಂಕ್‌ನ ನೆರವಿನೊಂದಿಗೆ **'ಕರ್ನಾಟಕ ಸಮಗ್ರ ಮತ್ತು ಸುಸ್ಥಿರ ಜಲ ಸಂಪನ್ಮೂಲ ನಿರ್ವಹಣೆ ಹೂಡಿಕೆ ಯೋಜನೆ'**ಯನ್ನು ಆರಂಭಿಸಿದೆ.

ಗೊಂದಿ ಉಪಯೋಜನೆ

ಈ ಯೋಜನೆಯ ಭಾಗವಾಗಿ ಮೊದಲನೆ ಹಂತದಲ್ಲಿ ಗೊಂದಿ ಅಣೆಕಟ್ಟೆಯ ಎಡ ಮತ್ತು ಬಲದಂಡೆ ಕಾಲುವೆಗಳ ಪುನರುಜ್ಜೀವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಇದರ ಜೊತೆಗೆ ಕೃಷಿಯಲ್ಲಿ ನೀರಿನ ಪರಿಣಾಮಕಾರಿ ಬಳಕೆಯನ್ನು ಉತ್ತೇಜಿಸಲು ಹಸಿರೆಲೆ ಗೊಬ್ಬರಗಳ ಬಳಕೆಗೆ ಆದ್ಯತೆ, ಹೆಸರು, ಅಲಸಂದೆ ಇತ್ಯಾದಿ ಬೆಳೆಗಳಿಗೆ ಪ್ರೋತ್ಸಾಹ, ರೈತ ಕ್ಷೇತ್ರ ಪಾಠಶಾಲೆ, ತರಬೇತಿ, ಸಾಮರ್ಥ್ಯ ಬಲವರ್ಧನೆ, ಅಧ್ಯಯನ ಪ್ರವಾಸ ಮುಂತಾದ ಹಲವು ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದೆ.

ಅದರಲ್ಲಿಯೂ 'ಶ್ರೀ' ಪದ್ಧತಿ ಭತ್ತ ಬೆಳೆಯುವ ವಿಧಾನದ ಬಗ್ಗೆ ಹೆಚ್ಚಿನ ಪ್ರಮಾಣದಲ್ಲಿ ಅರಿವು ಮೂಡಿಸುವುದು ಯೋಜನೆಯ ಧ್ಯೇಯವಾಗಿದೆ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ

ಮುಖ್ಯ ಇಂಜಿನಿಯರ್, ಯೋಜನಾ ಅನುಷ್ಠಾನ ಕಛೇರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ತುಂಗಾ ಮೇಲ್ದಂಡೆ ಯೋಜನೆ, ಶಿವಮೊಗ್ಗ – 577201

ಭದ್ರಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ
ಮಲವಗೊಪ್ಪ, ಶಿವಮೊಗ್ಗ – 577222

ಎಸ್.ಎಂ.ಇ.ಸಿ. ಇಂಡಿಯಾ ಪ್ರೈವೇಟ್ ಲಿಮಿಟೆಡ್
ನಂ 28, 1ನೇ ಅಡ್ಡರಸ್ತೆ ಬೀದಿ, ಗಾಂಧಿನಗರ
ಶಿವಮೊಗ್ಗ – 577201

ADB | BHADRA CADA | KARNATAKA NEERAVARI NIGAM LTD. | SMEC Member of the Surbana Jurong Group

ಕರ್ನಾಟಕ ಸಮಗ್ರ ಮತ್ತು ಸುಸ್ಥಿರ ಜಲ ಸಂಪನ್ಮೂಲ ನಿರ್ವಹಣೆ ಹೂಡಿಕೆ ಯೋಜನೆ

'ಶ್ರೀ' ಪದ್ಧತಿ
ಕಡಿಮೆ ನೀರು ಅಧಿಕ ಇಳುವರಿ

ನೆರವು: ವಿಷಿಯನ್ ಡೆವಲಪ್‌ಮೆಂಟ್ ಬ್ಯಾಂಕ್

ಅನುಷ್ಠಾನ: ಕರ್ನಾಟಕ ನೀರಾವರಿ ನಿಗಮ ನಿಯಮಿತ

ಯೋಜನಾ ಸಹಾಯ ಸಂಸ್ಥೆ: ಎಸ್.ಎಂ.ಇ.ಸಿ. ಇಂಡಿಯಾ ಪ್ರೈವೇಟ್ ಲಿಮಿಟೆಡ್

ಸಹಯೋಗ: ಭದ್ರಾ ಕಾಡಾ ಮತ್ತು ಗೊಂದಿ ನೀರು ಬಳಕೆದಾರರ ಸಹಕಾರ ಸಂಘಗಳು

'ಶ್ರೀ' ಪದ್ಧತಿ

ಕಡಿಮೆ ನೀರಲ್ಲಿ ಭತ್ತ ಬೆಳೆಯುವ ವಿಧಾನವೇ 'ಶ್ರೀ' ಪದ್ಧತಿ.

(SRI–Syistem of Rice Intencification)

ನಿಸರ್ಗದಲ್ಲಿ ಆಗುತ್ತಿರುವ ಅನಿರೀಕ್ಷಿತ ಬದಲಾವಣೆಗಳು ಮಳೆ ಬೀಳುವಿಕೆ ಮತ್ತು ಹಂಚಿಕೆಯ ಮೇಲೆ ತೀವ್ರ ಪರಿಣಿತಕ್ಕೆ ಕಾರಣವಾಗಿವೆ. ಜಲಾಶಯಗಳು ಭರ್ತಿಯಾಗುತ್ತಿಲ್ಲ, ಇರುವ ಅಲ್ಪ-ಸ್ವಲ್ಪ ನೀರು ಕುಡಿಯಲಷ್ಟೇ ಸಾಕಾಗುತ್ತಿದೆ. ಇದರ ಜೊತೆಗೆ ವಿಪರೀತ ಕೊಳವೆ ಬಾವಿಗಳಿಂದಾಗಿ ಅಂತರ್ಜಲವೂ ಬರಿದಾಗುತ್ತಿದೆ. ಇಂತಹ ವಿಷಮ ಪರಿಸ್ಥಿತಿಯಲ್ಲಿ ಬೇಸಾಯದ ಉಳಿವು ಮತ್ತು ಉನ್ನತಿ ಅಡಗಿರುವುದು ಸಂಪನ್ಮೂಲಗಳ ಜಾಣ್ಮೆಯ ಬಳಕೆಯಲ್ಲಿ. ವಿಶೇಷವಾಗಿ ಹೆಚ್ಚು ನೀರನ್ನು ಬಯಸುವ ಭತ್ತದ ಬೆಳೆಯಲ್ಲಿ ನೀರಿನ ಮಿತ ಬಳಕೆಯ ಬಗ್ಗೆ ಹೆಚ್ಚಿನ ಆದ್ಯತೆ ನೀಡುವುದು ತುರ್ತಿನ ಕೆಲಸ. 'ಶ್ರೀ' ಪದ್ಧತಿ ಅನುಸರಿಸುವುದರಿಂದ ಇದು ಸಾಧ್ಯ.

ಏನಿದು 'ಶ್ರೀ' ಪದ್ಧತಿ?

ಕಡಿಮೆ ನೀರು, ಬೀಜ ಬಳಸಿ, ಹೆಚ್ಚು ಅಂತರ ಕೊಟ್ಟು ಅಧಿಕ ಇಳುವರಿ ಪಡೆಯುವ ವಿಧಾನ. ಈ ಪದ್ಧತಿ ಅನುಸರಣೆಯಿಂದ ಬಿತ್ತನೆ ಬೀಜದಲ್ಲಿ ಉಳಿತಾಯ, ಶೇ 60ರಷ್ಟು ನೀರಿನ ಉಳಿತಾಯ, ಕಡಿಮೆ ಗೊಬ್ಬರ ಬಳಕೆ, ಮಣ್ಣಿನ ಗುಣಧರ್ಮದಲ್ಲಿ ಸುಧಾರಣೆ ಹಾಗೂ ಬಹುಮುಖ್ಯವಾಗಿ ಇಳುವರಿಯಲ್ಲಿ ಶೇ36ಕ್ಕೂ ಅಧಿಕ ಹೆಚ್ಚಳ ಸಾಧ್ಯ.

ಉಪಯೋಗಗಳು

ಕಾಲುವೆ ಅಚ್ಚುಕಟ್ಟು ಪ್ರದೇಶದಲ್ಲಿ ಶ್ರೀ ಪದ್ಧತಿ ಅನುಸರಿಸುವುದರಿಂದ ಅನೇಕ ಅನುಕೂಲಗಳಿವೆ. ಮುಖ್ಯವಾಗಿ:

ಬಿತ್ತನೆ ಬೀಜದಲ್ಲಿ ಉಳಿತಾಯ

ಪ್ರಚಲಿತ ಪದ್ಧತಿಯಲ್ಲಿ ಪ್ರತಿ ಎಕರೆಗೆ 25–30 ಕೆ.ಜಿ. ಬೀಜ ಬೇಕಾದರೆ ಶ್ರೀ ಪದ್ಧತಿಯಲ್ಲಿ ಕೇವಲ 2 ಕೆ.ಜಿ. ಸಾಕಾಗುತ್ತದೆ. ಶೇ 90ಕ್ಕೂ ಅಧಿಕ ಬೀಜದ ಉಳಿತಾಯ.

ಕಳೆ ತೆಗೆಯುವುದು ಸುಲಭ

ಸಾಲು ನಾಟಿ ಹಾಕುವುದರಿಂದ ವೀಡರ್ (ಕಳೆ ತೆಗೆಯುವ ಕೈಚಾಲಿತ ಸಾಧನ) ಬಳಸಿ ಸುಲಭವಾಗಿ ಕಳೆ ತೆಗೆಯಬಹುದು. ಕೂಲಿಕಾರರ ಅವಲಂಬನೆ ಹೆಚ್ಚಾಗಿರುವುದಿಲ್ಲ. ಯಂತ್ರಗಳನ್ನು ಬಳಸಿ ಕಟಾವು ಮಾಡಲೂ ಸಹಕಾರಿ. ನಾಟಿಗೆ ಹೆಚ್ಚು ಕೂಲಿಕಾರರು ಬೇಕಾದರೂ ಕಳೆ ಹಾಗೂ ಕಟಾವಿನ ಸಮಯದಲ್ಲಿ ಕಡಿಮೆ ಸಾಕು.

ನೀರಿನಲ್ಲಿ ಉಳಿತಾಯ

ಇದು ಅತ್ಯಂತ ಪ್ರಮುಖವಾದುದು. ಪ್ರಚಲಿತ ಪದ್ಧತಿಯಲ್ಲಿ ಭತ್ತ ಬೆಳೆಯಲು ಎಕರೆಗೆ ಸುಮಾರು 50 ಲಕ್ಷ ಲೀಟರ್ ನೀರು ಬೇಕು. ಅಂದರೆ ಒಂದು ಕೆ.ಜಿ. ಭತ್ತ ಬೆಳೆಯಲು 3700 ಲೀಟರ್ ನೀರು ಅಗತ್ಯ. ಆದರೆ ಶ್ರೀ ಪದ್ಧತಿ ಅಳವಡಿಕೆಯಿಂದ ಎಕರೆಗೆ 21 ಲಕ್ಷ ಲೀಟರ್ ನೀರು ಸಾಕು. ಅಂದರೆ ಒಂದು ಕೆ.ಜಿ.ಗೆ 1480 ಲೀಟರ್ ಸಾಕಾಗುತ್ತದೆ. ಒಟ್ಟಾರೆ ಶೇ 60ರಷ್ಟು ನೀರನ್ನು ಉಳಿಸಬಹುದು. ಇದರಿಂದ ಕೊನೆ ಕಾಲುವೆ ರೈತರಿಗೂ ನೀರು ಸಾಕಷ್ಟು ದೊರೆಯುವುದಲ್ಲದೆ ಎರಡನೇ ಬೆಳೆ ಇಡಲೂ ಸಹಕಾರಿ.

ಕೀಟ/ರೋಗದ ಹಾವಳಿ ಕಡಿಮೆ

ಸಸಿಯಿಟದ ಸಸಿಗೆ ಹಾಗೂ ಸಾಲಿನಿಂದ ಸಾಲಿಗೆ ಒಂದು ಅಡಿ ಅಂತರ ಬಿಡುವುದರಿಂದ ಗಾಳಿ ಬೆಳಕು ಸಸಿಗಳ ಎಲ್ಲಾ ಭಾಗಕ್ಕೂ ಚೆನ್ನಾಗಿ ಬೀಳುತ್ತದೆ. ಹಾಗಾಗಿ ಕೀಟ/ರೋಗದ ಹಾವಳಿ ಕಡಿಮೆ.

ಮಣ್ಣಿನ ಗುಣಧರ್ಮದಲ್ಲಿ ಸುಧಾರಣೆ

ಶ್ರೀ ಪದ್ಧತಿಯಲ್ಲಿ ತೇವಾಂಶ ಕಾಪಾಡುವಷ್ಟು ಮಾತ್ರ ನೀರು ಬಿಡುವುದರಿಂದ ಮಣ್ಣಿನಲ್ಲಿ ಗಾಳಿ ಸರಾಗವಾಗಿ ಸಂಚರಿಸಲು ಅನುಕೂಲ. ಇದರಿಂದ ಸೂಕ್ಷ್ಮಾಣುಜೀವಿಗಳ ಕ್ರಿಯೆಗೆ ಉಪಯೋಗವಾಗಿ ಮಣ್ಣಿನ ರಚನೆಯಲ್ಲಿ ಸುಧಾರಣೆ ಕಡಿಮೆ.

ಇಳುವರಿ ಹೆಚ್ಚಳ

ಗುಣಿಗೆ ಒಂದು ಅಥವಾ ಎರಡೇ ಪೈರು ನಾಟಿ, ಸಾಕಷ್ಟು ಅಂತರ ನೀಡುವಿಕೆಯಿಂದಾಗಿ ಯಕೇಚ್ಚ ತೆಂಡೆ ಬರುತ್ತದೆ. ವೀಡರ್ ಬಳಕೆಯಿಂದ ಮಣ್ಣು ಸಡಿಲಗೊಂಡು ಬೇರುಗಳ ಬೆಳವಣಿಗೆಗೆ ಸಹಕಾರಿ. ಇದರಿಂದಾಗಿ ಸಹಜವಾಗಿಯೇ ಇಳುವರಿಯೂ ಅಧಿಕವಾಗುತ್ತದೆ.

ಪರಿಸರಕ್ಕೆ ಪೂರಕ

ಗದ್ದೆಗಳಲ್ಲಿ ಯಕೇಚ್ಚ ನೀರು ನಿಲ್ಲಿಸುವುದರಿಂದ ಮಿಥೇನ್ ಉತ್ಪತ್ತಿಯಾಗಿ ಗಾಳಿಯಲ್ಲಿ ಸೇರಿ ಪರಿಸರಕ್ಕೆ ಧಕ್ಕೆಯಾಗುತ್ತದೆಂದು ಅಧ್ಯಯನಗಳು ಹೇಳುತ್ತವೆ. ಶ್ರೀ ಪದ್ಧತಿಯಲ್ಲಿ ಸದಾ ನೀರು ನಿಲ್ಲಿಸುವುದಿಲ್ಲವಾದ್ದರಿಂದ ಆ ಸಮಸ್ಯೆಗೆ ಕಡಿವಾಣ ಹಾಕಬಹುದು.

ಶ್ರೀ ಪದ್ಧತಿಯ ವಿವಿಧ ಹಂತಗಳು



ಸಾಲು ಹೊಡೆಯುವುದು

ನಾಟಿ ಮಾಡುವುದು

ಪೈರು ಬೆಳವಣಿಗೆ ಹಂತದಲ್ಲಿ

ವೀಡರ್ ಬಳಸಿ ಅಂತರ ಬೇಸಾಯ

ತೆನೆ ಹಂತದಲ್ಲಿ 'ಶ್ರೀ' ಪದ್ಧತಿಯ ಭತ್ತದ ತಾಕು